

ಹೆಜ್ಜಾರ್ಲೆ ಪಕ್ಷಿಯೊಂದಿಗೆ ಕೊಕ್ಕರೆ ಬೆಳ್ಳೂರಿನ ಪಕ್ಷಿಪ್ರೇಮಿ ಬಿ. ಲಿಂಗೇಗೌಡ

ಗೂಡು ಕಟ್ಟಲು ಗಂಡು ಕೊಕ್ಕರೆ ನೆರವು ನೀಡಿದರೆ, ಮರಿಗಳ ಆಹಾರ, ಲಾಲನೆ ಪಾಲನೆಯನ್ನು ಹೆಣ್ಣು ಕೊಕ್ಕರೆ ನೋಡಿಕೊಳ್ಳುತ್ತದೆ.

ಹೆಜ್ಜಾರ್ಲೆಗಳು ದಢೂತಿಯಾಗಿರುವ ಕಾರಣ ದೊಡ್ಡ ರೆಂಬೆಗಳ ಮರಗಳನ್ನೇ ಗೂಡು ಕಟ್ಟಲು ಆಯ್ಕೆ ಮಾಡಿಕೊಳ್ಳುತ್ತವೆ. ಕಣ್ಣಿನ ಸುತ್ತ ಹಳದಿ ಮಿಶ್ರಿತ ಬಣ್ಣ, ಗುಲಾಬಿ ಬಣ್ಣದ ಕೊಕ್ಕು ಮತ್ತು ರೆಕ್ಕೆಗಳು ಬೂದು ಬಣ್ಣದಿಂದ ಕೂಡಿರುತ್ತವೆ. ಪರಭಕ್ಷಕಗಳಿಂದ ತಮ್ಮ ಮರಿಗಳನ್ನು ರಕ್ಷಿಸಿಕೊಳ್ಳುವ ಕೌಶಲವನ್ನು ಇವು ಸಿದ್ಧಿಸಿಕೊಂಡಿವೆ. ಇವುಗಳ ಸರಾಸರಿ ಆಯಸ್ಸು 30 ವರ್ಷ.

## ಹೆಜ್ಜಾರ್ಲೆ ಬಳಗ

“1994ರಲ್ಲಿ ಮೈಸೂರು ಅಮೆಚೂರ್ ನ್ಯಾಚುರಲಿಸ್ಟ್ (ಮ್ಯಾನ್) ಸಂಸ್ಥೆಯ ಮನು ಅವರ ಸಹಕಾರದೊಂದಿಗೆ ‘ಹೆಜ್ಜಾರ್ಲೆ ಬಳಗ’ ಸ್ಥಾಪಿಸಿ, ಗಾಯಗೊಂಡ ಮರಿಗಳನ್ನು ಸ್ವಂತ ಖರ್ಚಿನಲ್ಲಿ ಸಂರಕ್ಷಿಸುತ್ತಿದ್ದೆವು. ವರ್ಷಕ್ಕೆ 5ರಿಂದ 10 ಪೆಲಿಕಾನ್‌ಗಳು ಮರದಿಂದ ಬಿದ್ದು ಗಾಯಗೊಳ್ಳುತ್ತಿದ್ದವು. 2022ರವರೆಗೆ ಸುಮಾರು 300 ಮರಿಗಳನ್ನು ಸಂರಕ್ಷಿಸಿದ್ದೇವೆ. ನಂತರ ಅರಣ್ಯ ಇಲಾಖೆಯೇ ಪಕ್ಷಿಪಾಲನಾ ಕೇಂದ್ರ ತೆರೆದು, ಆ ಕಾರ್ಯನಿರ್ವಹಿಸುತ್ತಿದೆ” ಎಂದು ಗ್ರಾಮದ ಪಕ್ಷಿಪ್ರೇಮಿ ಬಿ. ಲಿಂಗೇಗೌಡರು ಮಾಹಿತಿ ನೀಡಿದರು.

ಪೆಲಿಕಾನ್ ಪಕ್ಷಿ



### ಪರಿಸರಪ್ರೇಮಿಗಳ ಬೇಡಿಕೆಗಳು

- ಪಕ್ಷಿ ವೀಕ್ಷಣೆಗೆ ಅನುಕೂಲವಾಗುವಂತೆ ‘ವೀಕ್ಷಣಾ ಗೋಪುರ’ ನಿರ್ಮಿಸಬೇಕು.
- ಕೊಕ್ಕರೆ ಬೆಳ್ಳೂರು ಕೊಳವನ್ನು (ಗ್ರಾಮಸ್ಥರ ಪ್ರಕಾರ ಕೆರೆ) ಏತ ನೀರಾವರಿ ಯೋಜನೆ ಮೂಲಕ ತುಂಬಿಸಬೇಕು.
- ಮರಗಳಿಗೆ ಬಲೆ ಕಟ್ಟುವ ಮೂಲಕ ಮರಿಗಳು ಕೆಳಗೆ ಬೀಳದಂತೆ ರಕ್ಷಿಸಬೇಕು.
- ಸಮುದಾಯ ಭವನ ಮತ್ತು ಪ್ರವಾಸಿಗರಿಗೆ ವಸತಿ ಕೊಠಡಿಗಳನ್ನು ನಿರ್ಮಿಸಬೇಕು.
- ಸೂಚನಾ ಫಲಕ, ಆಸನಗಳು, ಕುಡಿಯುವ ನೀರು ಮತ್ತು ಶೌಚಾಲಯ ನಿರ್ಮಿಸಬೇಕು.
- ಗ್ರಾಮದ ಮಧ್ಯ ಭಾಗದಲ್ಲಿರುವ ಎರಡು ಮೊಬೈಲ್ ನೆಟ್‌ವರ್ಕ್ ಟವರ್‌ಗಳನ್ನು ದೂರಕ್ಕೆ ಸ್ಥಳಾಂತರಿಸಬೇಕು.

## ಪಕ್ಷಿ ಪಾಲನಾ ಕೇಂದ್ರ

ಮೇಲುಕೋಟೆ ವನ್ಯಜೀವಿ ವಲಯ ವ್ಯಾಪ್ತಿಗೆ ಬರುವ ಈ ಪಕ್ಷಿಧಾಮದ ಸ್ಥಳದಲ್ಲಿ ಅರಣ್ಯ ಇಲಾಖೆ ವತಿಯಿಂದ ‘ಪಕ್ಷಿಪಾಲನಾ ಕೇಂದ್ರ’ ತೆರೆಯಲಾಗಿದೆ. ಇಲ್ಲಿ ಗಾಯಗೊಂಡ ಸುಮಾರು 20 ಮರಿಗಳನ್ನು ಸಂರಕ್ಷಿಸಲಾಗಿದೆ. ಗಾಯ ವಾಸಿಯಾಗಿ, ರೆಕ್ಕೆ ಬಲಿತು ಹಾರುವಂತಾದ ನಂತರ ಪಕ್ಷಿಗಳನ್ನು ಇಲ್ಲಿಂದ ಬಿಡುಗಡೆ ಮಾಡಲಾಗುತ್ತದೆ. ಜತೆಗೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ಮಾಹಿತಿ ಕೇಂದ್ರವನ್ನು ಸ್ಥಾಪಿಸಿದ್ದು, ಇಲ್ಲಿ ಪುಸ್ತಕ, ಚಾರ್ಟ್ ಮತ್ತು ಪಕ್ಷಿಗಳ ಫೋಟೊಗಳನ್ನು ಪ್ರವಾಸಿಗರಿಗಾಗಿ ಒದಗಿಸಲಾಗಿದೆ.



ಬಣ್ಣದ ಕೊಕ್ಕರೆಗಳ ಬೆಚ್ಚನೆ ಗೂಡುಗಳು

## ಗ್ರಾಮಸ್ಥರಿಗೆ ಪ್ರೋತ್ಸಾಹಧನ

ಪಕ್ಷಿಗಳು ಗೂಡು ಕಟ್ಟಿರುವ ಮರಗಳನ್ನು ಕಡಿಯದಂತೆ ಅದರ ಮಾಲೀಕರಿಗೆ ಸರ್ಕಾರ ಪ್ರತಿ ವರ್ಷ ಪ್ರೋತ್ಸಾಹಧನ ನೀಡುತ್ತಿದೆ. ‘ವರ್ಲ್ಡ್ ವೈಲ್ಡ್‌ಲೈಫ್ ಫಂಡ್’ (WWF) ಸಮೀಕ್ಷೆ ನಡೆಸಿದ ಪ್ರಕಾರ, ಈ ಬಾರಿ ಹೆಜ್ಜಾರ್ಲೆ ಪಕ್ಷಿಗಳ 300 ಗೂಡುಗಳನ್ನು ಗುರುತಿಸಲಾಗಿದೆ. ಕಳೆದ ಬಾರಿ 110 ಗೂಡುಗಳು ಮಾತ್ರ ಕಂಡುಬಂದಿದ್ದವು. ಈ ಬಾರಿ ಸುಮಾರು 2500 ಬಣ್ಣದ ಕೊಕ್ಕರೆಗಳೂ ಇಲ್ಲಿಗೆ ಧಾವಿಸಿವೆ.

‘ಮಹಡಿಯಲ್ಲಿ (ಮರದ ಮೇಲೆ) ಪಕ್ಷಿಗಳು, ನೆಲ ಅಂತಸ್ತಿನಲ್ಲಿ (ಮರದ ಕೆಳಗೆ) ನಾವು ಒಟ್ಟಿಗೆ ಒಂದೇ ಕುಟುಂಬದ ಸದಸ್ಯರಂತೆ ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ. ಅವುಗಳಿಂದ ನಮಗೆ, ನಮ್ಮಿಂದ ಅವುಗಳಿಗೆ ಯಾವತ್ತೂ ಧಕ್ಕೆಯಾಗಿಲ್ಲ. ಪ್ರತಿ ವರ್ಷ ಊರಿಗೆ ಬರುವ ವಲಸೆ ಪಕ್ಷಿಗಳನ್ನು ಸಂಭ್ರಮದಿಂದ ಸ್ವಾಗತಿಸುತ್ತೇವೆ. ಬರುವುದು ಸ್ವಲ್ಪ ತಡವಾದರೂ ಮನಸ್ಸಿನಲ್ಲಿ ಆತಂಕದ ಕಾರ್ಮೋಡ. ಅವುಗಳು ಬಂದರೆ ಊರಿನಲ್ಲಿ ಹಬ್ಬದ ವಾತಾವರಣ ಉಂಟಾಗುತ್ತದೆ’ ಎನ್ನುತ್ತಾರೆ ಗ್ರಾಮದ ಮಹಿಳೆಯರು.